(ಗೊಂದಲ)

ಅಧ್ಯಕ್ಷರು:- ಆ ಪ್ರಶ್ನೆ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಅವರಿಗೆ ಹೆಚ್ಚಿನ ವಿವರಗಳು ಬೇಕಾಗಿದ್ದರೆ ಅರ್ಧ ಗಂಟೆಯ ಚರ್ಚೆಗೆ ನೋಟೀಸ್ ಕಳುಹಿಸಲಿ. ನಾನು ನೋಡುತ್ತೇನೆ.

I don't continue Question Hour, after 12.30.

ಗದಗ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಕೆರೆಗಳ ಹೂಳೆತ್ತುವ ಕಾರ್ಯಕ್ರಮದ ಬಗ್ಗೆ

393(3542) ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್(ರೋಣ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಎಷ್ಟು ಕೆರೆಗಳ ಹೂಳೆತ್ತಲು ಸರ್ಕಾರ ಕ್ರಮ ಕೈಗೊಂಡಿದೆ?

ಆ) ರೋಣ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳ ಹೂಳೆತ್ತಲು ಸರ್ಕಾರ ಕ್ರಮ ಕೈಗೊಂಡಿದೆ? ಈ ಬಾಬಿಗಾಗಿ ಬಿಡುಗಡೆ ಮಾಡಿದ ಹಣವೆಷ್ಟು? ಖರ್ಚಾದ ಹಣವೆಷ್ಟು?

ಶ್ರೀ ಎಸ್. ಕುಮಾರ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :-

ಅ) ರಾಜ್ಯದಲ್ಲಿ ಒಟ್ಟು 243 ಕೆರೆಗಳ ಹೂಳೆತ್ತುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಪ್ರಸ್ತುತ ಸಾಲಿನಲ್ಲಿ ಒಂದು ಕೆರೆಯಲ್ಲಿ ರೈತರ ಪಾಲ್ಗೊಳ್ಳುವಿಕೆಯಿಂದ ಹೂಳೆತ್ತಲು 0. 10 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದ್ದು, 31-03-2000 ಅಂತ್ಯಕ್ಕೆ 10. 14 ಲಕ್ಷ ರೂ. ಗಳು ಖರ್ಚಾಗಿದೆ.

ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ರಾಜ್ಯದಲ್ಲಿರುವ 243 ಕೆರೆಗಳನ್ನು ಹೂಳು ಎತ್ತುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ.

ಇಲ್ಲಿಯವರೆಗೆ ನಮ್ಮ ರೋಣ ತಾಲ್ಲೂಕಿನಲ್ಲಿ 30ವರ್ಷಗಳ ಹಿಂದೆ ಐದು ಚಿಕ್ಕ ನೀರಾವರಿ ಕೆರೆಗಳನ್ನು ನಿರ್ಮಿಸಲಾಗಿತ್ತು. ಸುಮಾರು 773 ಹೆಕ್ಟೇರ್ ಭೂಮಿ ನೀರಾವರಿಯಾಗುತ್ತಿದೆ. ಆದರೆ ಇಲ್ಲಿಯವರೆಗೆ ಅಲ್ಲಿ ಯಾವುದೇ ಕೆರೆಯ ಹೂಳೆತ್ತುವ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಮಾನ್ಯ ಸಚಿವರು ಕಳೆದ ವರ್ಷದ ಅನುದಾನದಲ್ಲಿ ಕೇವಲ 10 ಸಾವಿರ ರೂಪಾಯಿಗಳು ಬಿಡುಗಡೆ ಮಾಡಲಾಗಿದೆ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ನಮ್ಮ ತಾಲ್ಲೂಕಿನ ರೈತರ ಗೋಳನ್ನು ತಪ್ಪಿಸಲು ಎಲ್ಲಾ ಕೆರೆಗಳ ಹೂಳೆತ್ತುವ ಕಾರ್ಯಕ್ರಮದಲ್ಲಿ ಅದನ್ನು ಒಳಪಡಿಸಬೇಕೆಂದು ಮಾನ್ಯ ಸಚಿವರನ್ನು ಒತ್ತಾಯಪಡಿಸುತ್ತಿದ್ದೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ :- ಮಾನ್ಯ ಅಧ್ಯಕ್ಷರೇ, ಈಗಾಗಲೇ ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ಬಹಳ ಬೃಹತ್ತಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಕೆರೆಗಳ ಹೂಳೆತ್ತುವುದು ಮತ್ತು ಅವುಗಳ ಸಮಗ್ರ ಅಭಿವೃದ್ಧಿ ಮಾಡಬೇಕೆಂಬ ದೃಷ್ಟಿಯಿಂದ ವಿಶ್ವಬ್ಯಾಂಕಿನೊಡನೆ ಬಹಳ ಮಾತುತತೆ ನಡೆದು ಒಂದು ಹಂತಕ್ಕೆ ತಲುಪಿದ್ದೇವೆ. 1999-2000ನೇ ಇಸವಿಗೆ 243 ಕೆರೆಗಳ ಹೂಳೆತ್ತುವ ಕಾರ್ಯಕ್ರಮವಿದ್ದು, 2000-2001ನೇ ಇಸವಿಗೆ ಒಂದು ವರ್ಷಕ್ಕೆ 5 ಸಾವಿರ ಕೆರೆಗಳಂತೆ 25 ಸಾವಿರ

ಕೆರೆಗಳ ಹೂಳೆತ್ತುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಹೋಬಳಿಗೊಂದು ಕೆರೆಯನ್ನು ಆಯ್ದುಕೊಂಡು ಅದರ ಹಿಂದುಮುಂದಿರುವ ಸರಣಿ ಕೆರೆಗಳನ್ನು ಜೋಡಿಸಿಕೊಂಡು ಒಳ್ಳೆಯ ರೀತಿಯಲ್ಲಿ ಆ ಕಾರ್ಯಕ್ರಮವನ್ನು ನಾವು ಮಾಡ ಬೇಕೆಂದಿದ್ದೇವೆ. ನೀರು ಬಳಕೆದಾರರ ಸೊಸೈಟಿಗಳಾದ ತಕ್ಷಣವೇ ಸೆಲೆಕ್ಷನ್ ಮಾಡುವ ಗೈಡ್‌ಲೈನ್ಸ್ ಅನ್ನು ತಮಗೆ ಕಳಿಸಿಕೊಡುತ್ತಿದ್ದೇವೆ. ಈ ವಿಷಯದಲ್ಲಿ ಎಲ್ಲ ಶಾಸಕರೂ ನಮ್ಮ ಜೊತೆಗೆ ಸಹಕರಿಸಬೇಕು. ಆಗ ಮಾತ್ರ ಇದು ಒಳ್ಳೆಯ ಕಾರ್ಯಕ್ರಮ ಆಗುತ್ತದೆ.

ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್:- ನಮ್ಮ ಗದಗ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕಾರ್ಯಕ್ರಮಗಳಿಗೆ ಸರಿಯಾದ ವ್ಯವಸ್ಥೆ ಇಲ್ಲ. ಯಾವುದೋ ಓಬಿರಾಯನ ಕಾಲದಲ್ಲಿ ಶಿರಹಟ್ಟಿಯಲ್ಲಿ ಒಂದು ಸಬ್ ಡಿವಿಜನ್ ಆಗಿದ್ದು ತದನಂತರ ಯಾವುದೇ ಇಲಾಖೆಗಳೂ ಇಲ್ಲಿಗೆ ಬಂದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ, ರಾಜ್ಯಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳ ಸಣ್ಣ ನೀರಾವರಿ ಕಾರ್ಯಕ್ರಮ ಇದ್ದರೂ ಗದಗ್ ಜಿಲ್ಲೆ ಕೇಂದ್ರ ಸ್ಥಾನದಲ್ಲಿ ಕನಿಷ್ಟ ಒಂದು ಡಿವಿಜನ್ ಅನ್ನು ತೆರೆಯಬೇಕೆಂದು ಮಾನ್ಯ ಸಚಿವರಿಗೆ ಒತ್ತಾಯ ತರುತ್ತಿದ್ದೇನೆ.

ಶ್ರೀ ಎಸ್.ಕುಮಾರ ಬಂಗಾರಪ್ಪ:- ರೈತರ ಪುನರ್‌ಸಂಘಟನೆ ಬಗ್ಗೆ ಎಲ್ಲೆಲ್ಲಿ ಸಮಸ್ಯೆಗಳಿವೆ ಎಂಬ ಬಗ್ಗೆ ಹಾಗೂ ಇಂಜಿನಿಯರ್ ಸಿಬ್ಬಂದಿಯನ್ನೂ ನೇಮಿಸಿಕೊಳ್ಳುವ ಬಗ್ಗೆ ಒಂದು ಪ್ರಸ್ತಾವನೆಯನ್ನು ಕ್ಯಾಬಿನೆಟಿಗೆ ಸಲ್ಲಿಸಲು ಹೇಳಿದ್ದಾರೆ. ಆಗ ತಾವು ಹೇಳಿದ ಮಾಹಿತಿಯನ್ನೂ ಪಡೆದು ಮುಂದುವರೆಯುತ್ತೇನೆ.

ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದವರು 243 ಕೆರೆಗಳ ಹೂಳೆತ್ತುವ ಕಾರ್ಯಕ್ರಮವನ್ನು ಹಾಕಿದ್ದಾರೆ. ಈ ಹೂಳೆತ್ತುವ ಕಾರ್ಯಕ್ರಮವನ್ನು ರೈತರ ಸಹಭಾಗಿತ್ವದಡಿ ಹಾಕಿದ್ದೀರೋ ಹೇಗೆ? ಹಾಗಿದ್ದರೆ ಅದಕ್ಕೆ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು? ಮತ್ತು ಜಿಲ್ಲಾವಾರು ಕೆರೆಗಳ ಪಟ್ಟಿಯನ್ನೂ ಕೊಡಿ. ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೂಳೆತ್ತುವುದಕ್ಕಾಗಿ ಸುಮಾರು 50 ಕೆರೆಗಳ ಪಟ್ಟಿಯನ್ನು ನಾನುಮಾನ್ಯ ಮುಖ್ಯ ಮಂತ್ರಿಗಳಿಗೆ, ಹಾಗೂ ಈ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೆ; ಒಂದು ಕೆರೆಯಲ್ಲಿ ಮಾತ್ರ ಆ ಕೆಲಸವಾಗಿದೆ. ಇದು ಬಹಳ ಮುಖ್ಯವಾದ ಕೆಲಸ ಬಹಳ ಕುಂಠಿತವಾಗುತ್ತಿದೆ. ಇದರಿಂದ ನನಗೆ ಬಹಳ ವೇದನೆಯುಂಟಾಗುತ್ತಿದೆ. ಈ ಕೆಲಸದಲ್ಲಿ ಎಷ್ಟು ಶ್ರದ್ಧೆ ಇದಕ್ಕರಬೇಕಾಗಿತ್ತೋ ಅದು ಕಾಣುತ್ತಿಲ್ಲವೆಂದು ಹೇಳಬಯಸುತ್ತೇನೆ. ಇದರ ಬಗ್ಗೆ ಒಂದು ಸಭೆಯನ್ನು ಕರೆಯಿರಿ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸದನದಲ್ಲೇ ಹೇಳಿದ್ದೆ. ಅವರು ಸಭೆಯನ್ನೂ ಇನ್ನೂ ಕರೆದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿರುವುದರಿಂದ ನಾನು ಹೇಳುತ್ತಿದ್ದೇನೆ, ಇಂತಹ ಮುಖ್ಯ ಕಾರ್ಯಕ್ರಮಕ್ಕೆ ಒತ್ತು ಕೊಡಬೇಕಾದ ಅವಶ್ಯಕತೆ ಇದೆ. ಆ ಕೆಲಸವನ್ನು ದಯವಿಟ್ಟು ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, ಇದೊಂದು ಬಹಳ ಪ್ರಾಮುಖ್ಯವಾದ ವಿಚಾರ. ರಾಜ್ಯ ಹಿಂದೆಂದೂ ಕಂಡರಿಯದ ಯೋಜನೆ ಒಂದನ್ನು ವಿಶ್ವ ಬ್ಯಾಂಕಿನ ಸಹಭಾಗಿತ್ವದಡಿ ನಾವು ಮಾಡುತ್ತಿದ್ದೇವೆ. ಮುಂದಿನ ಐದು ವರ್ಷಗಳಲ್ಲಿ ಕೇವಲ ಹೂಳೆತ್ತುವ ಸಂಕ್ಷಿಪ್ತ ಕಾರ್ಯಕ್ರಮ ಇದಲ್ಲ. ಕೆರೆಗಳ ಪುನರ್ ನಿರ್ಮಾಣ, ಕೆರೆಗಳಿಗೆ ಕಾಯಕಲ್ಪ ಮಾಡುವುದು ಸೇರಿದೆ ಕೇಂದ್ರ ಸರ್ಕಾರ ನಮ್ಮ ಈ ಯೋಜನೆಗೆ ತನ್ನ ಸಹಮತ ವ್ಯಕ್ತಪಡಿಸಿರುವುದಕ್ಕಾಗಿ ವಿಶೇಷವಾಗಿ

ಯಾವುದೇ ಯೋಜನೆಗೆ ಪೂರ್ವ ಭಾವಿಯಾಗಿ ಕೇಂದ್ರ ಸರ್ಕಾರ ಅದರ ಸಾಧ್ಯಕಬಾದಕಗಳು, ಆಗುವ ಅನುಕೂಲತೆ ಅನಾನುಕೂಲತೆ ಇವುಗಳನ್ನೆಲ್ಲ ಪರ್ಯಾಲೋಚಿಸಿ ಅನಂತರ ತನ್ನ ಶಿಫಾರಸ್ಸು ಮಾಡುತ್ತದೆ. ಅದಾದಮೇಲೆ this is a formality to get it approved in the Board of Directors of the World Bank.

ಈಗ ವಿಶ್ವಬ್ಯಾಂಕಿನ ಅಪ್ರೈಸಲ್ ಟೀಮ್ ಕಳೆದ ಎಂಟು ತಿಂಗಳಿಂದ ಐದಾರು ಬಾರಿ ಇಲ್ಲಿಗೆಬಂದಿವೆ. ಕೂಲಂಕುಷವಾಗಿ ಎಲ್ಲಾ ವಿವರಗಳನ್ನೂ ನಮ್ಮಿಂದ ಪಡೆದಿದ್ದಾರೆ. ಈ ಯೋಜನೆಯನ್ನು ಫಾಸ್ಟ್‌ಟ್ರಾಕ್ ಯೋಜನೆಯಾಗಿ ಪರಿವರ್ತನೆ ಮಾಡಿಕೊಂಡಿದ್ದಾರೆ. ಅದರ ಫಲಶ್ರುತಿ ಏನಾಗುತ್ತದೆ ಅಂದರೆ ಮುಂದಿನ ನವೆಂಬರ್‌ಗೆ ಬಿಡುಗಡೆಯಾಗಬೇಕಾದ ವಿಶ್ವ ಬ್ಯಾಂಕಿನ ಮೊದಲ ಕಂತು ಮುಂದಿನ ಮಾರ್ಚ್ ಏಪ್ರಿಲ್‌ನಲ್ಲೇ ನಮಗೆ ಒದಗಿಬರುವ ಸೂಚನೆಗಳಿವೆ. ಮಾನ್ಯ ಭೈರೇಗೌಡರು ಅವರ ತಾಲ್ಲೂಕಿನ50 ಕೆರೆಗಳ ಬಗ್ಗೆ ಪ್ರಸ್ತಾಪಿಸಿದರು. ನಾವು ಇಡೀ ರಾಜ್ಯದಲ್ಲಿರುವ 40 ಸಾವಿರ ಕೆರೆಗಳನ್ನೂ ಸಹ ಈ ಯೋಜನೆಯಡಿ ತರಲು ಪ್ರಯತ್ನಿಸುತ್ತಿದ್ದೇವೆ. ಈ ವರ್ಷ ಸಾಂಕೇತಿಕವಾಗಿ ಪ್ರತಿ ಹೋಬಳಿಯ ಒಂದು ಕೆರೆಯ ಪುನರ್‌ನಿರ್ಮಾಣ ಮಾಡಲು ನಾವು ಪ್ರಯತ್ನಿಸುತ್ತಿದ್ದೇವೆ. ವಿಶ್ವ ಬ್ಯಾಂಕಿನವರು ಹಣ ಕೊಡುವುದು ವಿಳಂಬವಾಗಬಹುದೆಂದುಕೊಂಡು ಹುಡ್ಕೊದಿಂದ 200 ಕೋಟಿ ರೂಪಾಯಿಗಳನ್ನು ಪಡೆಯಲು ಪೂರ್ವಸಿದ್ಧತೆ ಮಾಡಿಕೊಂಡಿದ್ದೇವೆ. ಆದರೆ ಇವತ್ತು ಕೋಲಾರ ಜಿಲ್ಲೆ ಒಂದನ್ನು ಬಿಟ್ಟು ಬೇರೆಲ್ಲ ಕೆರೆಗಳೂ ಸಮೃದ್ಧಿಯಾಗಿ ತುಂಬಿವೆ. ಈಗೇನಾದರೂ ಕೆರೆ ಪುನರ್‌ನಿರ್ಮಾಣ ಕಾರ್ಯ ಕೈಗೆತ್ತಿಕೊಂಡರೆ ಅದು ಕೌಂಟರ್ ಪ್ರೊಡಕ್ಟೀವ್ ಆಗುತ್ತದೆ. ಆದ್ದರಿಂದ ಜನವರಿ, ಫೆಬ್ರವರಿಯೊಳಗೆ ಎಲ್ಲಾ ಕೆರೆಗಳ ಪ್ರಾಜೆಕ್ಟ್ ರಿಪೋರ್ಟ್ ಮಾಡಿ, ಲೈನ್ ಎಸ್ಟಿಮೇಟ್ ಮಾಡಿಸಿ ಅನಂತರ ವ್ಯವಸ್ಥಿತವಾದ ರೀತಿಯಲ್ಲಿ ಕೆರೆಗಳ ಪುನರ್‌ನಿರ್ಮಾಣವನ್ನು ಆದ್ಯತೆ ಮೇಲೆ ತೆಗೆದುಕೊಳ್ಳಲು ನಾವು ಯೋಜನೆ ಸಿದ್ಧಪಡಿಸಿದ್ದೇವೆ. ನಿಜ, ಈ ಬಗ್ಗೆ ನಾನು ಸಭೆಯನ್ನು ಕರೆಯುತ್ತೇನೆಂದು ಹೇಳಿದ್ದೆ. ಈ ಸದನ ನಡೆಯುವ ವೇಳೆಯಲ್ಲಿ ಅಂತಹ ಸಭೆ ಕರೆದು ತಮ್ಮ ಅಮೂಲ್ಯ ಸಲಹೆಗಳನ್ನು ಪಡೆದು ಮುಂದಿನ ಕಾರ್ಯಾಚರಣೆ ಮಾಡುತ್ತೇವೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ (ಬೀರೂರು):- ಕಳೆದ ಅಧಿವೇಶನದಲ್ಲಿ ಖಾಸಗಿ ಸದಸ್ಯರ ನಿರ್ಣಯದ ರೂಪದಲ್ಲಿ ಈ ವಿಷಯ ಪ್ರಸ್ತಾಪವಾದಾಗ ಮಾನ್ಯ ಮುಖ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದ್ದರು. ಯಾವ್ಯಾವ ಕೆರೆಗಳು ಎಷ್ಟಿವೆ? ಅವುಗಳ ಬೌಂಡರಿ ಎಷ್ಟಿದೆ? ಅಂತ ನಾವು ಅಳತೆ ಮಾಡಿಸಿ ಅವುಗಳನ್ನು ರಕ್ಷಣೆ ಮಾಡುತ್ತೇವೆ ಎಂದು. ಆ ಕಾರ್ಯ ಇಲ್ಲಿಯವರೆಗೆ ಪ್ರಾರಂಭವಾಗಿಲ್ಲ. ಈಗ ಹೇಗೂ ಕೆರೆಗಳು ತುಂಬಿದ್ದೂ, ನೀರು ತುಂಬಿರುವಷ್ಟು ಅದರ ಬೌಂಡರಿ ಎಂದು ಗೊತ್ತಾಗುತ್ತಿದೆ. ದಯಮಾಡಿ ಕಂದಾಯ ಇಲಾಖೆ ಮೂಲಕ ಕೆರೆಗಳ ಬೌಂಡರಿ ಫಿಕ್ಸ್ ಮಾಡಿಸಿಕೊಡಬೆಕೆಂದು ನಾನು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ :- ಮಾನ್ಯ ಅಧ್ಯಕ್ಷರೇ ನೀರು ನಿಂತಿರುವುದೇ ಅದರ ಬೌಂಡರಿ. ಅದನ್ನೇ ಆಧಾರವಾಗಿಟ್ಟುಕೊಂಡು ಕಂದಾಯ ಇಲಾಖೆಯವರು ಆ ಕೆಲಸವನ್ನು ಬೇಗನೆ ಮಾಡಬೇಕು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ ದಯಮಾಡಿ ಅದನ್ನು ಒಂದು ಆದೇಶದ ಮೂಲಕ ರಿಲೀಸ್ ಮಾಡಿಬಿಟ್ಟರೆ ಅನುಕೂಲವಾಗುತ್ತದೆ.

ಶ್ರೀ ಎಸ್.ಎಂ.ಕೃಷ್ಣ :- ಕೆರೆಗಳ ಪುನರ್‌ನಿರ್ಮಾಣ ಕೆಲಸದ ಅತ್ಯಂತ ಪ್ರಾಮುಖ್ಯವಾದ ಭಾಗವೆಂದರೆ ಕೆರೆಗಳ ಚಕ್ಕು ಬಂದ ಗುರ್ತಿಸಬೇಕಾಗಿರುವುದು; ಈ ಮೂಲಕ ನಾನು ಸದನಕ್ಕೆ ಆಶ್ವಾಸನೆ ಕೊಡುತ್ತೇನೆ. ಇಡೀ ರಾಜ್ಯದಲ್ಲಿ ಕೆರೆಗಳ ಚಕ್ಕು ಬಂದಿಯನ್ನು ತೀರ್ಮಾನ ಮಾಡಲಿಕ್ಕೆ ಸಂಬಂಧಪಟ್ಟ ಇಲಾಖೆಗೆ ಸೂಕ್ತ ನಿರ್ದೇಶನ ಕೊಡುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ :- ಕೆರೆಗಳ ಒತ್ತುವರಿ ವಿಚಾರದಲ್ಲಿ 'ಕನ್ನಡ ಪ್ರಭ' ಪತ್ರಿಕೆಯಲ್ಲಿ ಮಾನ್ಯ ಸಚಿವರ ಒಂದು ಹೇಳಿಕೆ ಬಂದಿತ್ತು. ಯಾರು ಕೆರೆ ಒತ್ತುವರಿ ಮಾಡುವರೋ ಅದು ಕೋರ್ಟಿನ ನಿಂದನೆಯಾಗುವುದು, ಅದಕ್ಕೆ ಸಂಬಂಧಿಸಿದ ಜಿಲ್ಲಾಧಿಕಾರಿ ಮತ್ತು ಎಸ್‌ಪಿಗಳೇ ಕಾರಣಕರ್ತರಾಗುತ್ತಾರೆಂದು ಹೇಳಿದ್ದರು. ಹಾಗೇನಾದರೂ ಸುಪ್ರೀಂ ಕೋರ್ಟ್‌ನಲ್ಲಿ ಆಗಿದ್ದರೆ ಅದರ ನಕಲು ನಮಗೆಲ್ಲ ಕೊಟ್ಟರೆ ಪ್ರತಿ ದಿವಸ ಒಂದು ಕೇಸು ನಾವುಗಳೇ ಹಾಕಲು ಮುಂದೆ ಹೋಗುತ್ತೇವೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ:- ಇವೆಲ್ಲ ರೈತರ ಸಹಭಾಗಿತ್ವದಡಿ ಆಗಬೇಕಾದ ಕಾರ್ಯಕ್ರಮಗಳಿವು. ನೀರು ಬಳಕೆದಾರರ ಸಂಘ ರಚಿಸಿದ ಉದ್ದೇಶವೇ ಅದು. ರೈತರ ಸಹಭಾಗಿತ್ವದಡಿ ಆಗಬೆಕಾದ ಕಾರ್ಯಕ್ರಮಗಳಿವು. ನೀರು ಬಳಕೆದಾರರ ಸಂಘ ರಚಿಸಿದ ಉದ್ದೇಶವೇ ಅದು. ರೈತರು ಸಂಪೂರ್ಣವಾಗಿ ಇದರಲ್ಲಿ ಪಾಲ್ಗಳ್ಳಬೇಕೆಂಬ ಉದ್ದೇಶವಿದು. ಆಮೇಲೆ ಒತ್ತುವರಿ ವಿಚಾರದಲ್ಲಿ ಈಗಾಗಲೇ ಕಾನೂನೇ ಇದೆ. ಮತ್ತೆ ಹೊಸ ಕಾನೂನು ತರುವ ಅವಶ್ಯಕತೆ ಇಲ್ಲ. ಸುಪ್ರೀಂ ಕೋರ್ಟ್ ಬೇರೆ ವಿಚಾರದಲ್ಲಿ ಹೇಳಿದ್ದುದು. ಇದಕ್ಕೂ ನಾಳೆ ಅಪ್ಲೈ ಆಗಬಹುದೆಂದು ಹೇಳಿದ್ದೇ ಅಷ್ಟೇ. ಆಮೇಲೆ 243 ಕೆರೆಗಳ ಈಗಿನ ಕಾರ್ಯಕ್ರಮವೇನಿದೆ ಅದು 1999-2000ನೇ ಸಾಲಿನ ಕಾರ್ಯಕ್ರಮ. ಈಗ ಕೆರೆಗಳಲ್ಲಿ ಸಂಪೂರ್ಣ ನೀರಿರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲು ಆಗುವುದಿಲ್ಲ. ತದನಂತರ ಅದನ್ನು ಕೈಗೊಳ್ಳುತ್ತೇವೆ.

ಬಿಜಾಪುರ ತಾಲ್ಲೂಕಿನಲ್ಲಿ ಬಬಲೆಶ್ವರ ಏತ ನೀರಾವರಿ ಯೋಜನೆಯ ಅನುಷ್ಠಾನ

394 (3592) ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) :- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ ?

ಅ) ಬಿಜಾಪುರ ತಾಲ್ಲೂಕಿನಲ್ಲಿ ಬಬಲೇಶ್ವರ ಏತ ನೀರಾವರಿ ಯೋಜನೆಯ ಕಾಮಗಾರಿ ಮಂಜೂರಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ, ಯೋಜನೆಯನ್ನು ಅನುಷ್ಠಾನಗೊಳಿಸದಿರಲು ಕಾರಣವೇನು?

ಇ) ಈ ಯೋಜನೆಯ ಕಾಯರನಿರ್ವಹಣೆಗಾಗಿ ಒಂದು ಉಪ ವಿಭಾಗವನ್ನು ಸರ್ಕಾರ ವರ್ಗಾಯಿಸಲು ಆದೇಶಿಸಿದ್ದು ಇದುವರೆವಿಗೂ ವರ್ಗಾಯಿಸದಿರಲು ಕಾರಣವೇನು?

ಈ) ಈ ಯೋಜನೆಯನ್ನು ಪರಿಪೂರ್ಣಗೊಳಿಸಲು ಕಾಲಮಿತಿ ಏನಾದರೂ ಇದೆಯೇ?

ಶ್ರೀ ಎಚ್.ಕೆ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಮಂಜೂರಾಗಿಲ್ಲ.